(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೇ, ಈ ದಿನದ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ 4ನೇ ಪಟ್ಟಿಯಲ್ಲಿನ ಒಟ್ಟು 25 ಪ್ರಶ್ನೆಗಳ ಪೈಕಿ 18 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಮಾಗಡಿ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಾಣ

120 (103) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಹಲವಾರು ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲದಿರುವುದರಿಂದ ಅಂಗನವಾಡಿ ಕಟ್ಟಡಗಳನ್ನು ಅರಳಿ ಕಟ್ಟೆಯ ಮರದ ಕೆಳಗಡೆ, ದೇವಸ್ಥಾನಗಳಲ್ಲಿ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ; (ಇಂಥ ಕೇಂದ್ರಗಳ ಸಂಖ್ಯೆ ಹಾಗೂ ವಿವರ ನೀಡುವುದು);

ಆ) ಈ ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು; ಹಾಗಿದ್ದಲ್ಲಿ ಯಾವಾಗ ನಿರ್ಮಿಸಲಾಗುವುದು?

ಶ್ರೀಮತಿ ವಿಮಲಾಬಾಯಿ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು)

ಅ) ಮಾಗಡಿ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ 244 ಅಂಗನವಾಡಿ ಕೇಂದ್ರಗಳ ಪೈಕಿ 206 ಕೇಂದ್ರಗಳಿಗೆ ಕಟ್ಟಡದ ಸೌಲಭ್ಯ ಒದಗಿಸಲಾಗಿದೆ. 38 ಕೇಂದ್ರಗಳು ಮಾತ್ರ ದೇವಸ್ಥಾನದಲ್ಲಿ ನಡೆಯುತ್ತಿದ್ದು, ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಈ ಯೋಜನೆಯಲ್ಲಿ ಯಾವುದೇ ಕೇಂದ್ರವು ಅರಳಿ ಕಟ್ಟೆ ಮರದ ಕೆಳಗಡೆ ನಡೆಯುತ್ತಿರುವುದಿಲ್ಲ. ಒಟ್ಟು ಶೇಕಡ 84ರಷ್ಟು ಕೇಂದ್ರಗಳಿಗೆ ಕಟ್ಟಡ ಸೌಲಭ್ಯ ಒದಗಿಸಲಾಗಿದೆ.

ಆ) ಮಾಗಡಿ ಯೋಜನೆಯಲ್ಲಿ ಇಲಾಖಾ ವತಿಯಿಂದ ಈವರೆಗೆ 26 ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ. 97-98ನೇ ಸಾಲಿನಲ್ಲಿ 7 ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಇಲಾಖೆಯ ವಂತಿಗೆ ಒಂದು ಕಟ್ಟಡಕ್ಕೆ ರೂ. 30,000 ರಂತೆ ಒಟ್ಟು ರೂ. 2.10 ಲಕ್ಷಗಳನ್ನು ಮಿಸಲಿಡಲಾಗಿದೆ. ಈ ಸಲುವಾಗಿ 1ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು ಅಂಗನವಾಡಿ ಕಟ್ಟಡಗಳು ನಿರ್ಮಾಣ ಹಂತದಲ್ಲಿದೆ. 98-99ನೇ ಸಾಲಿನಲ್ಲಿ 13 ಕಟ್ಟಡಗಳ ನಿರ್ಮಾಣಕ್ಕಾಗಿ ಕರಡು ಯೋಜನೆಯನ್ನು ಸಲ್ಲಿಸಲಾಗಿದೆ. ಕಟ್ಟಡಗಳ ನಿರ್ಮಾಣವನ್ನು ಅನುದಾನದ ಲಭ್ಯತೆಯ ಮೇಲೆ ತೆಗೆದುಕೊಳ್ಳಲಾಗುತ್ತಿದೆ.